ಅ. ನ. ಕೃ. ಗ್ರಂಥಸೂಚಿ

[೧೯೨೪ರಿಂದ ೧೯೬೦ರ ವರೆಗೆ]

ಸಿದ್ಧಪಡಿಸಿದವರು:

ಶ್ರೀ ದೇವದಾಸ ಬ್ಯಾಡಗಿ

ಮತ್ತು

ಶ್ರೀ ಶ್ರೀನಿವಾಸ ಹಾವನೂರ

[ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಾಲಯ, ಧಾರವಾಡ]

ಪ್ರಕಟಣೆ

೨೭ನೇ ಡಿಸೆಂಬರ ೧೯೬೦

ಸ್ವಾಗತ ಸಮಿತಿ, ೪೨ನೇ ಸಾಹಿತ್ಯ ಸಮ್ಮೇಲನ

ಮಣಿಪಾಲ, ದ. ಕ.

ನಿವೇದನೆ

೪೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಮಣಿಪಾಲ (ಉಡುಪಿ) ಅಧಿವೇಶನದ ಅಧ್ಯಕ್ಷರಾದ ಶ್ರೀ ಅರಕಲಗೂಡು ನ. ಕೃಷ್ಣರಾಯರು ೧೯೨೪ರಿಂದ ೧೯೬೦ರ ವರೆಗಿನ ಅವಧಿಯಲ್ಲಿ ರಚಿಸಿದ ಗ್ರಂಥಗಳ ಸೂಚಿಯನ್ನು ಸಾದರಪಡಿಸುತ್ತಿದ್ದೇವೆ.

ಅವರ ಎಲ್ಲ ಕೃತಿಗಳನ್ನು ಈ ಕೆಳಗಿನ ಸಾಹಿತ್ಯ ವಿಭಾಗಗಳಲ್ಲಿ ಒಂದುಗೂಡಿಸಲಾಗಿದೆ.

೧. ಕಾದಂಬರಿ ೨. ಸಣ್ಣ ಕತೆ ೩. ನಾಟಕ
೪. ಪ್ರಬಂಧ, ವಿಮರ್ಶೆ ೫. ಜೀವನ ಚರಿತ್ರೆ
೬ ಸಂಪಾದಿತ ಕೃತಿಗಳು ೭. ಅನುವಾದಿತ ಗ್ರಂಥಗಳು

ಪರಿಶಿಷ್ಟವಾಗಿ ಅ. ನ. ಕೃ. ಬಗ್ಗೆ ಬರೆದ ಗ್ರಂಥಗಳನ್ನೂ ಕೂಡ ಲಾಗಿದೆ.

ಒಟ್ಟು ಇಲ್ಲಿ ಕೊಡಲಾದ ಅವರ ಕೃತಿಗಳ ಸಂಖ್ಯೆ ೧೨೬ರಲ್ಲಿ ೬೪ ಕಾದಂಬರಿಗಳಿವೆ. ಅವರು ಬರೆದ ಪುಟ ಸುಮಾರು ೨೨,೫೦೦ರಷ್ಟಾಗುತ್ತದೆ.

ಈ ಗ್ರಂಥ ಸೂಚಿಯನ್ನು ಸಿದ್ಧಪಡಿಸುವಾಗ ನಾವು ಕೆಲಸ ಮಾಡುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದ ಲೈಬ್ರರಿಯ, ಅಲ್ಲದೆ ಕರ್ನಾಟಕ ಸಾಹಿತ್ಯ ಮಂದಿರದವರ ನೆರವನ್ನು ಧಾರಾಳವಾಗಿ ಪಡೆದಿದ್ದೇವೆ.

ಸಮ್ಮೇಳನದ ಸ್ವಾಗತಸಮಿತಿಯವರು ಇದನ್ನು ಪ್ರಕಟಿಸುತ್ತಿದ್ದಾರೆ. ಮುಂದಣ ಸಮ್ಮೇಳನಗಳ ಸ್ವಾಗತಸಮಿತಿಯವರು ಆ ಆ ಅಧ್ಯಕ್ಷರ ಸಾಹಿತ್ಯ ಪರಿಚಯವನ್ನು ಈ ರೀತಿಯಲ್ಲಿ ಮಾಡಿಕೊಡಬೇಕೆನ್ನುವ ಸತ್ಪರಂಪರೆಗೆ ನಾಂದಿ ಹಾಕಿದ್ದಾರೆ.

ಧಾರವಾಡ,
ಡಿಸೆಂಬರ ೧೯೬೦

ದೇವಿದಾಸ ಬ್ಯಾಡಗಿ
ಶ್ರೀನಿವಾಸ ಹಾವನೂರ

೧ ಕಾದಂಬರಿಗಳು

ಅಗ್ರತಾಂಬೂಲ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೭, ೨೭೧, ೨-೦೦

-ಸೇವೆಯ ಹೆಸರಿನಲ್ಲಿ ನಡೆಯುವ ಅನ್ಯಾಯಗಳನ್ನು ವಿವರಿಸುವ ಕಾದಂಬರಿ.

ಅಪರಾಜಿತೆ

ಮೈಸೂರು, ವಿದ್ಯಾನಿಧಿ, ೧೯೫೯, ೨೩೦, ೨-೦೦

-ಹಟಕ್ಕೆ ಬಿದ್ದ ಹೆಣ್ಣು ಅಪರಾಜಿತೆ-ಯಾದ ವಿಶಿಷ್ಟ ಮನೋಭಾವವನ್ನು ಇಲ್ಲಿ ಕಾಣಬಹುದು.

ಅಭಿಮಾನ

ಬೆಂಗಳೂರು, ಜಿ. ಕೆ. ಬ್ರದರ್ಸ್, ೧೯೬೦, ೧೮೨, ೨-೦೦

-ನಾಟಕ ಕಂಪೆನಿಗಳ ಏಳುಬೀಳುಗಳು ಹೊನ್ನು-ಹೆಣ್ಣುಗಳನ್ನು ಅವಲಂಬಿಸಿರುವ ಸೂಚನೆ ಇಲ್ಲಿದೆ.

ಅಮರ ಆಗಸ್ಟ

ಬೆಂಗಳೂರು, ಆನಂದ ಬ್ರದರ್ಸ್, ೧೯೫೦, ೧೪೧, ೨-೦೦

-೧೯೪೨ರ ಚಳುವಳಿಯು ಒಂದು ಹಳ್ಳಿಯಲ್ಲಿ ಬೆಳೆದು ಬಂದ ಬಗೆಯನ್ನು ಚಿತ್ರಿಸಲಾಗಿದೆ.

ಪುಸ್ತಕದ ಹೆಸರಿನ ಎದುರಿಗೆ ಕಂಸಿನಲ್ಲಿ ವರ್ಷವಿದ್ದುದಾದರೆ ಅದು ಮೊದಲ ಪ್ರಕಟಣೆಯ ವರ್ಷವನ್ನು ಸೂಚಿಸುತ್ತದೆ.

ಅರಳು ಮರಳು (೧೯೫೧)

ಬೆಂಗಳೂರು, ಅಶೋಕ, ೧೯೫೬, ೨೮೯, ೧-೫೦

-ಧರ್ಮದ ಹೆಸರಿನಲ್ಲಿ ಜನತೆಯ ಅಜ್ಞಾನಕ್ಕೆ ಪುಟಗೊಟ್ಟು, ಅವರನ್ನು ಸುಲಿಯುವ ಸಮಾಜವಂಚಕರ ರೀತಿ-ನೀತಿ ಇಲ್ಲಿ ವರ್ಣಿತವಾಗಿದೆ.

ಆಶೀರ್ವಾದ, ಅನುಗ್ರಹ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೫, ೫೨೮, ೩-೦೦

-ನೀತಿ-ಮೌಲ್ಯಗಳ ನಿರೂಪಣೆ ಈ ಕೃತಿಯ ಉದ್ದೇಶ. 'ಅನುಗ್ರಹವು' ಆಶೀರ್ವಾದದ ಮುಂದಿನ ಭಾಗ.

ಈಚಲು ಮರದವ್ವ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೨೭೧, ೧-೫೦

-ಅಪೇಯ ಪಾನವು ಒಂದು ಕುಟುಂಬವನ್ನು ಹಾಳುಗೆಡವಿದ ಕಥೆಯಿದು.

ಈ ದಾರಿ ಆ ದಾರಿ

ಬೆಂಗಳೂರು, ಶಾರದಾ, ೧೯೬೦, ೧೭೨, ೧-೮೦

-ರಾಜಕೀಯ ಧುರೀಣರಿಂದ ಸಾಮಾಜಿಕ ಜೀವನದ ಮೇಲೆ ಆಗುವ ಪರಿಣಾಮ ಚಿತ್ರಣ.

ಉದಯರಾಗ (೧೯೩೪)

ಬೆಂಗಳೂರು, ಅಶೋಕ, ೧೯೫೫, ೧೫೭, ೧-೦೦

-ಓರ್ವ ಚಿತ್ರಗಾರನು ತನ್ನ ಗುರಿಯಿಂದ ಚ್ಯುತನಾಗಿ ಸ್ನೇಹಿತನ ಸಹಾಯದಿಂದ ಮಾರ್ಗವನ್ನು ಕಂಡುಕೊಂಡುದರ ಕಥೆ. ಅ. ನ. ಕೃ.ರ ಎರಡನೆಯ ಕಾದಂಬರಿ.

ಕಟ್ಟಿದ ಬಣ್ಣ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೨೬೨, ೧-೫೦

-'ಸದ್ಯದ ಮೈಸೂರು ಸಂಗೀತದ ಪ್ರಪಂಚದ ಚಿತ್ರವೇ ನನ್ನ ಈ ಕಾದಂಬರಿಯ ವಸ್ತು.'

ಕಣ್ಣೀರು (೧೯೪೭)

ಬೆಂಗಳೂರು, ಅಶೋಕ, ೧೯೫೮, ೧೫೬, ೧-೨೫

-ವರದಕ್ಷಿಣೆಯ ಅವಾಸ್ತವ ಬೇಡಿಕೆಯಿಂದಾಗುವ ಅವಾಂತರ ಈ ಕಾದಂಬರಿಯಲ್ಲಿ ಬಂದಿದೆ.

ಕಂಕಣ ಬಲ

ಬೆಂಗಳೂರು, ಕಲಾಮಾಲಾ, ೧೯೫೮, ೨೦೪, ೧-೫೦

-ದಾಂಪತ್ಯ ವಿಚ್ಛೇದನದ ಅವಿದ್ಧ ಸನ್ನಿವೇಶಗಳ ಚಿತ್ರಣ.

ಕಾಮಿನಿ ಕಾಂಚನ, ಕಾಂಚನ ಗಂಗಾ

ಬೆಂಗಳೂರು, ಶಾರದಾ, ೧೯೫೫, ೫೨೧, ೩-೦೦

-ದುಡ್ಡಿನ ಹವ್ಯಾಸದ ವಿವಿಧ ಆವಿಷ್ಕಾರಗಳನ್ನೂ, ತತ್ಪರಿಣಾಮವಾಗಿ ಕಥಾನಾಯಕನ ಜೀವನದಲ್ಲಾದ ಏರು ಇಳಿವುಗಳನ್ನೂ ರೂಪಿಸುವ ಎರಡು ಕಾದಂಬರಿಗಳು.

ಕಾಲಚಕ್ರ (೧೯೫೧)

ಬೆಂಗಳೂರು, ಅಶೋಕ, ೧೯೫೬, ೨೩೧, ೧-೫೦

-ವ್ಯಕ್ತಿಗಳ ವಿಲೋಭನೆಯಿಂದಾಗಿ ಕುಟುಂಬದ ವ್ಯವಸ್ಥೆ ಕದಡಿದಾಗ ಅದು ಸಾಮಾಜಿಕ ಶೈಥಿಲ್ಯದ ಸಂಕೇತವಾಗುತ್ತದೆ ಎಂಬುದು ಈ ಕೃತಿಯ ನಿಲುಮೆಯಾಗಿದೆ.

ಕಿತ್ತೂರು ರಾಣಿ ಚೆನ್ನಮ್ಮ

ಮೈಸೂರು, ಗೌರೀಶಂಕರ, ೧೯೫೪, ೧೪೫, ೧-೫೦

-ಕಥಾನಾಯಕಿ ಬ್ರಿಟಿಷ್ ಸತ್ತೆಯ ವಿರುದ್ಧ ಹೋರಾಡಿದ ಪ್ರಥಮ ಕನ್ನಡಿತಿ-.

ಕುಲಪುತ್ರ

ಬೆಂಗಳೂರು, ಪ್ರಸಾದ್, ೧೯೫೮, ೨೧೨, ೧-೮೦

-ಜಾತಿ-ಮತಗಳ ಕಲಹಕ್ಕೆ ಗುರಿಯಾದ ಹಳ್ಳಿಯು ಈ ಕೃತಿಯ ಹಿನ್ನೆಲೆಯಾಗಿದೆ.

ಕುಂಕುಮ ಪ್ರಸಾದ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೮, ೧೯೪, ೧-೭೫

-ಗೃಹಜೀವನದ ಮಹತ್ತ್ವವನ್ನು ಬಿಂಬಿಸುವ ಕೌಟುಂಬಿಕ ಕಥನ.

ಗೃಹಲಕ್ಷ್ಮಿ, ರುಕ್ಮಿಣಿ, ತಾಯಿಮಕ್ಕಳು

ಬೆಂಗಳೂರು, ವಾಹಿನಿ, ೧೯೫೩-೫೫, ೮೩೭, ೪-೫೦

-ಸಾಮಾನ್ಯರ ಜೀವನದಲ್ಲಿ ಸುಪ್ತವಾಗಿರುವ ದೈವಿಕ ಚೇತನದ ಚಿತ್ರಣ. ಅಂಥ ದೈವಿಕ ಕಳೆಯಿಂದ ಕೂಡಿ, ಆದರ್ಶ ಗೃಹಿಣಿಯಾಗಿ ಬಾಳಿದ ರುಕ್ಮಿಣಿಯು ಚೇತನವು ಅವಳ ಮಕ್ಕಳಲ್ಲಿ ಆವಿರ್ಭಾವವನ್ನು ಹೊಂದಿದ ಬಗೆಯನ್ನು ಕೊನೆಯಲ್ಲಿ ಕಾಣಬಹುದು.

ಗೌರಿ

ಬೆಂಗಳೂರು, ಜಿ. ಕೆ. ಬ್ರದರ್ಸ್, ೧೯೫೮, ೨೩೫, ೧-೭೫

-'ಸಮಾಜದ ಬೇರೆಬೇರೆ ಅಂತಸ್ತುಗಳಿಗೆ ಸೇರಿದ ಕುಟುಂಬಗಳ ಜೀವನ ಚಿತ್ರಣವೇ ಗೌರಿ ಕಾದಂಬರಿಯ ವಸ್ತು.'

ಚಿತ್ರವಿಚಿತ್ರ (೧೯೫೨)

ಮೈಸೂರು, ವಿದ್ಯಾನಿಧಿ, ೧೯೫೮, ೨೯೯: ೨-೫೦

-ಚಲನಚಿತ್ರ ಪ್ರಪಂಚದ ಆಗುಹೋಗುಗಳ ವಾಸ್ತವ್ಯ ದರ್ಶನ.

ಜಾತಕ ಪಕ್ಷಿ

ಬೆಂಗಳೂರು, ಅಶೋಕ, ೧೯೫೬, ೨೧೦, ೧-೫೦

-ಮಿಶ್ರವಿವಾಹದ ಕ್ಲಿಷ್ಟ ಪ್ರಶ್ನೆಯನ್ನು ಎತ್ತಿಕೊಂಡು ರಚಿತವಾದ ಕಾದಂಬರಿ.

ಜೀವನದಿ (೧೯೫೩)

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೩೨೬, ೧-೫೦

-ಅತ್ತಿಗೆಯ ವಿಷಯದಲ್ಲಿ ಸಲ್ಲದ ಅಪವಾದಕ್ಕೆ ಗುರಿಯಾಗಿ ವಿರಕ್ತನಾಗಿ ಅಲೆದಾಡಿದವನ ಕಥೆ.

ಜೀವನಯಾತ್ರೆ (೧೯೩೪)

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೧೩೧, ೧-೨೫

-ದೇವದಾಸಿ ಸಮಸ್ಯೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿತವಾದ ಕಾದಂಬರಿ. ಸಮಸ್ಯೆಯ ಹಿನ್ನೆಲೆಯನ್ನು ಕೊಡುವ ಸುದೀರ್ಘ ಹಿನ್ನುಡಿಯನ್ನೊಳಗೊಂಡಿದೆ. ಅ. ನ. ಕೃ. ರ ಮೊದಲ ಕಾದಂಬರಿ.

ತಾಯಿಯ ಕರುಳು (೧೯೫೦)

ಮೈಸೂರು, ಡಿ. ವಿ. ಕೆ., ೧೯೫೭, ೧೩೩, ೧-೭೫

-ಮಕ್ಕಳ ಏಳ್ಗೆಗಾಗಿ ಸದಾ ಹಂಬಲಿಸುವ ತಾಯಿಯ ಹೃದಯದ ವಿವಿಧ ಬಗೆಯ ತೊಳಲಾಟದ ನಿರೂಪಣೆ.

ಧರ್ಮಪತ್ನಿ

ಗಾಯತ್ರಿ, ೧೯೬೦, ೧೭೫, ೧-೮೦

-ನಿಷ್ಪಾಪ ಜೀವಿಗಳಾದ ಓರ್ವ ತಾಯಿ, ಅವಳ ಮಗಳ ಕರುಣ ಕಥೆ.

ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು, ಅಪರಂಜಿ; ಕಳಂಕಿನಿ, ಕಬ್ಬಿಣದ ಕಾಗೆ

ಮೈಸೂರು, ಪ್ರಸಾದ್, ೧೯೫೮-೫೯, ೧೪೯೬, ೧೧-೭೫
ತಿಪಟೂರು, ಸುದರ್ಶನ, ೧೯೬೦, ೨೫೪, ೨-೫೦
(ಕೊನೆಯದರ ಪ್ರಕಾಶನ)

-ವೇಶ್ಯಾ ಸಮಸ್ಯೆಯ ವಿಶಾಲವಾದ ಹಿನ್ನೆಲೆಯನ್ನಿಟ್ಟುಕೊಂಡು, ೧೯೫೦ರಿಂದ ೧೦ ವರ್ಷಗಳ ವರೆಗಿನ ಅವಧಿಯಲ್ಲಿ ರಚಿತವಾದ ೬ ಕಾದಂಬರಿಗಳು.

ನಟಸಾರ್ವಭೌಮ (೧೯೪೪)

ಮೈಸೂರು, ಡಿ. ವಿ. ಕೆ.. ೧೯೫೫, ೯೮೬, ೪-೫೦

-ಅಭಿಜಾತ ನಟನೋರ್ವನ ಜೀವನದಲ್ಲಿ ಬರುವ ವಿವಿಧ ಸೋಲು ಗೆಲುವುಗಳ ಹಿನ್ನೆಲೆಯಲ್ಲಿ, ಅವನ ಧ್ಯೇಯ ಸಾಧನೆಯನ್ನು ವಿವರಿಸಿದ್ದಾಗಿದೆ.

ಪಶ್ಚಾತ್ತಾಪ, ಪುನರಾವತಾರ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೫-೫೬, ೪೯೫, ೩-೦೦

-ಹರಿಜನ ಸಮಸ್ಯೆಯ ಬುನಾದಿ, ಪರಂಪರಾಗತ ಭಾವನೆ, ಕಥಾ ನಾಯಕನಾದ ಚೆನ್ನನು ಈ ಸಮಸ್ಯೆಯನ್ನು ಎದುರಿಸಿದ ಬಗೆ ಇವುಗಳನ್ನು ಈ ಕೃತಿಗಳಲ್ಲಿ ಕಾಣಬಹುದು.

ಪಂಜರದ ಗಿಳಿ (೧೯೫೪)

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೧೬೬, ೧-೫೦

-ಸ್ತ್ರೀ ಸ್ವಾತಂತ್ರ್ಯದ ಪ್ರಶ್ನೆಯ ಪೂರ್ವೋತ್ತರ ವಾದಗಳನ್ನು ಮಂಡಿಸುವ ಕಾದಂಬರಿ.

ಪಾಪಿಯ ನೆಲೆ

ಬೆಂಗಳೂರು, ಅಶೋಕ, ೧೯೫೬, ೨೩೪, ೧-೫೦

–ಪಾಪಿಗಳನ್ನು ಸನ್ಮಾರ್ಗಕ್ಕೆ ತಿರುಗಿಸಲು ಸಾಧ್ಯವೇ? ಎಂದು ಮುಂತಾದ ಪ್ರಶ್ನೆಗಳನ್ನು ಓದುಗರಲ್ಲಿ ಮೂಡಿಸುವ ಕೃತಿ.

ಬಣ್ಣದ ಬದುಕು (೧೯೫೩)

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೨೨೩, ೧-೫೦

-ಅಲ್ಪಕ್ಕೆ ಆಸೆಪಟ್ಟು ನಾಟ್ಯಕಲೆಯ ಭವ್ಯದರ್ಶನದಿಂದ ವಿಮುಖನಾದ ಕೀರ್ತಿ; ಅದೇ ದರ್ಶನಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದ ಕಲ್ಪನಾ-ಈ ವ್ಯಕ್ತಿಗಳ ಬದುಕಿನ ಚಿತ್ರಣ ಇಲ್ಲಿದೆ.

ಭೂಮಿತಾಯಿ

ಬೆಂಗಳೂರು, ಜಿ. ಕೆ. ಬ್ರದರ್ಸ್, ೧೯೫೮, ೨೧೪, ೧-೫೦

-ನಮ್ಮ ದೇಶ ಮುಂದೆ ಬರಬೇಕಾದರೆ, ಹಳ್ಳಿಗಳು ಸುಧಾರಿಸದೇ ಅನ್ಯ ಗತಿಯಿಲ್ಲವೆಂಬ ಭಾವನೆಯನ್ನು ಮೂಡಿಸುವ ಕಾದಂಬರಿ.

ಮರಳು ಮನೆ, ಕೀರ್ತಿಕಳಸ

ಮೈಸೂರು, ವಿದ್ಯಾನಿಧಿ, ೧೯೫೯, ೫೭೨, ೪-೭೫

-ಇಂದಿನ ರಾಜಕೀಯ, ಸಾಮಾಜಿಕ ಸನ್ನಿವೇಶಗಳಲ್ಲಿ ಸತ್ಯ ಜೀವನವನ್ನು ನಡೆಸುವುದರಿಂದ ಒದಗುವ ಸಂಕಷ್ಟಗಳ ಬಣ್ಣನೆ ಇದೆ.

ಮಂಗಳಸೂತ್ರ (೧೯೪೦)

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೫, ೨೨೧, ೨-೦೦

-ಹೊಸದು, ಹಳೆಯದರ ಸ್ಪಷ್ಟ ತಿಳುವಳಿಕೆ, ಅವುಗಳನ್ನು ನಮ್ಮ ಇಂದಿನ ಜೀವನದ ಪ್ರಗತಿಗೆ ಹೊಂದಿಕೊಳ್ಳುವ ಅಗತ್ಯವನ್ನು ಬಿಂಬಿಸುವ ಕರುಣಾಮಯ ಕಥನ.

ಮುಡಿಮಲ್ಲಿಗೆ

ಬೆಂಗಳೂರು, ಜಿ. ಕೆ. ಬ್ರದರ್ಸ್, ೧೯೫೯, ೧೯೧, ೨-೦೦

-ಹಿರಿಯರು ಕಿರಿಯರನ್ನು ಹಿತವಾಗಿ ಕಾಣಬೇಕೆಂಬ ಸೂಚನೆಯುಳ್ಳ ಕೌಟುಂಬಿಕ ಕಾದಂಬರಿ.

ಮುಯ್ಯಿಗೆ ಮುಯ್ಯಿ (೧೯೫೦)

ಬೆಂಗಳೂರು, ವಸಂತ, ೧೯೫೪, ೨೦೬, ೧-೦೦

-ಮಾಮಾಚಾರವನ್ನು ಕುರಿತ ಕಾದಂಬರಿ. ಆದರಿಂದ ಪ್ರಜಾಪೀಡನೆ, ಲೋಕಕಲ್ಯಾಣ ಇವೆರಡೂ ಸಾಧ್ಯವೆಂಬ ಅಂಶವನ್ನೊಳಗೊಂಡಿದೆ.

ರಣವಿಕ್ರಮ

ಬೆಂಗಳೂರು, ಶಾರದಾ, ೧೯೫೯, ೨೦೧, ೧-೭೫

-ಮೊಘಲ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದ ಅಪ್ರತಿಮ ವೀರ ರಾಣಾ ಪ್ರತಾಪಸಿಂಹನ ಕಥೆ ಇದು.

ರೂಪಶ್ರೀ

ಬೆಂಗಳೂರು, ಸುದರ್ಶನ, ೧೯೬೦, ೧೯೯, ೨-೦೦

-ಸತ್ಯ, ಪ್ರೇಮ, ತ್ಯಾಗ-ಸ್ತ್ರೀಯ ಈ ಮೂರು ಗುಣಗಳು ಈ ಕಾದಂಬರಿಯ ಮೂರು ಪಾತ್ರಗಳಲ್ಲಿ ಮೈದಾಳಿವೆ.

ವಿಜಯ ವಿದ್ಯಾರಣ್ಯ, ತಪೋಬಲ, ಪುಣ್ಯಪ್ರಭಾವ, ಪ್ರೌಢಪ್ರತಾಪಿ, ಮೋಹನಮುರಾರಿ, ಯಶೋದುಂದುಭಿ, ಅಭಯಪ್ರದಾನ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೮-೬೦, ೧೧೭೪, ೧೩-೨೫

-ಶ್ರೀ ವಿದ್ಯಾರಣ್ಯರಿಂದ ಆರಂಭವಾದ ವಿಜಯನಗರ ಸಾಮ್ರಾಜ್ಯದ ಸಮಗ್ರ ಚಿತ್ರವನ್ನು ಕೂಡ ತಿಳಿಸಿರುವ ಕಾದಂಬರಿಗಳ ಮಾಲಿಕೆಯಲ್ಲಿ, ಕೃಷ್ಣದೇವರಾಯನ ಉತ್ತರಾರ್ಧ ಜೀವನದ, ವೈಭವದ ವರೆಗೆ ಕಥೆ ಹರಿದು ಬಂದಿದೆ.

ಶ್ರೀಮತಿ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೮, ೩೬೪, ೨-೫೦

-ಪಾಶ್ಚಾತ್ಯ ಪೌರ್ವಾತ್ಯ ವಿಚಾರಗಳ ಘರ್ಷಣೆಯಲ್ಲಿ ಮೂರು ದಂಪತಿಗಳು ಎದುರಿಸಿದ ಸಮಸ್ಯೆಗಳ ನಿರೂಪಣೆ.

ಸಂಗ್ರಾಮ

ಧಾರವಾಡ, ಪ್ರತಿಭಾ, ೧೯೫೩, ೨೫೯, ೩-೦೦

-ಭಾರತೀಯ ಸಂಪ್ರದಾಯದಲ್ಲಿ ಬೆಳೆದು ಬಂದ ಶಿಲ್ಪಿಯು ಹೆಣ್ಣಿನ ಲೋಭಕ್ಕೆ ಒಳಗಾಗಿ ಅಧೋಗತಿಗೆ ಇಳಿದುದೂ, ಅಲ್ಲಿಂದ ಮರಳಿ ತನ್ನ ಜಾಡನ್ನು ಕಂಡುಕೊಂಡುದುದೂ ವರ್ಣಿತವಾಗಿದೆ.

ಸಂಧ್ಯಾರಾಗ (೧೯೩೮)

ಮೈಸೂರು, ಪ್ರಸಾದ್, ೧೯೫೫, ೩೧೫, ೧-೫೦

-ದೈವದತ್ತ ಕಲೆಯ ಆವಿಷ್ಕಾರದಲ್ಲಿ ತನ್ನ ದೇಹ, ಜೀವಗಳನ್ನು ಸವೆಸಿದ ಸಂಗೀತಗಾರನ ದುರಂತ ಚಿತ್ರಣ. ಸಾರ್ವತ್ರಿಕ ಮೆಚ್ಚುಗೆಯನ್ನು ಪಡೆದ ಕೃತಿ. ಹಿನ್ನುಡಿಯಾಗಿ 'ಸಂಧ್ಯಾರಾಗ ಪ್ರಶಸ್ತಿ' ಯನ್ನು ಒಳಗೊಂಡಿದೆ.

ಸಾಹಿತ್ಯರತ್ನ (೧೯೫೩), ಗಾಜಿನ ಮನೆ, ಕನ್ನಡಮ್ಮನ ಗುಡಿಯಲ್ಲಿ, ದೀಪಾರಾಧನೆ

ಬೆಂಗಳೂರು, ಅಶೋಕ, ೧೯೫೪-೫೫, ೧೦೬೪, ೬-೦೦

–'ಈ ನಾಲ್ಕು ಕಾದಂಬರಿಗಳಿಂದ ನಮ್ಮ ನಾಡವರಿಗೆ ನಮ್ಮ ನಾಡಿನ ಸಾಹಿತ್ಯ, ಪತ್ರಿಕೋದ್ಯಮಗಳ ಪೂರ್ವ ಹಾಗೂ ವರ್ತಮಾನ ಸ್ಥಿತಿಯ ಅರಿವು ಸ್ವಲ್ಪವಾದರೂ ಆದರೆ ನನ್ನ ಪ್ರಯತ್ನ ಸಾರ್ಥಕ'

ಸ್ತ್ರೀಮುಖವ್ಯಾಘ್ರ

ಬೆಂಗಳೂರು, ಗೀತಾ, ೧೯೬೦, ೨೨೩, ೨-೦೦

–ಋಜು ಮಾರ್ಗದಲ್ಲಿ ನಡೆದ ಹೆಣ್ಣು ತನ್ನ ಮತ್ತು ರಾಷ್ಟ್ರದ ಅಭ್ಯುದಯವನ್ನು ಸಾಧಿಸಬಲ್ಲಳು. ಅದೇ, ಆಶೆ-ಆಮಿಷಗಳಿಗೆ ಬಲಿಯಾದವಳು ತನ್ನ ಮತ್ತು ಸುತ್ತಲಿನ ಸಮಾಜವನ್ನು ಹದಗೆಡಿಸುವಳು. ಇದು ಈ ಕೃತಿಯ ಸೂತ್ರ.

ಹೃದಯ ಸಾಮ್ರಾಜ್ಯ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೬೦, ೧೬೩, ೨-೦೦

–'ಜೀವನದ ಕಹಿ-ಸಿಹಿಯನ್ನು ಕಂಡುಂಡ ಸೀತಮ್ಮ, ಪಾತಕ್ಕ ತಮ್ಮ ಅಂತಸ್ಸತ್ವದಿಂದ ಅನೇಕರ ಜೀವನಕ್ಕೆ ಬೆಳಕು ನೀಡಿದ ಕಥೆ.'

ಹುಲಿಯುಗುರು ಭಾಗ ೧-೨

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೭, ೬೦೯, ೫-೦೦

–ಲೋಕ ಜೀವನದ ಮೇರೆ ಮೀರಿ ಹೊರನಿಂತವರನ್ನು ಸಮಾಜದ್ರೋಹಿಗಳೆಂದು ಹೊರ ಹಾಕದೆ, ಅವರ ಹೃದಯದಲ್ಲಿ ಋಜು ಬಾಳ್ವೆಯ ಬೆಳಕನ್ನು ಬಿತ್ತಬೇಕೆನ್ನುವ ಸೂತ್ರ ಈ ಕಾದಂಬರಿತ್ರಯದಲ್ಲಿದೆ.

ಹೆಂಗರುಳು

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೮, ೨೦೦, ೧-೭೫

-ಬಂಜೆಯೋರ್ವಳ ಸಂಜೆಗನಸಿನ ಹೊನಲಿನಲ್ಲಿ ಹೆಂಗರುಳಿನಿಂದ ಕೂಡಿದ ವ್ಯಕ್ತಿಗಳುಳ್ಳ ಕೌಟುಂಬಿಕ ಕಥನ.

ಹೊಸಲು ದಾಟಿದ ಹೆಣ್ಣು (೧೯೪೬)

ಮೈಸೂರು, ಡಿ. ವಿ. ಕೆ., ೧೯೫೪, ೨೫೨, ೧-೫೦

-ಹೊಸಲನ್ನು ದಾಟ-ಹೊರಗಿನ ಕ್ಷೇತ್ರದಲ್ಲಿ ಕಾಲಿಟ್ಟ ಹೆಣ್ಣು, ಸ್ವಾರ್ಥಿಗಳಾದ ರಾಜಕೀಯ ವ್ಯಕ್ತಿಗಳ ಕೈಯಲ್ಲಿ ಸಿಕ್ಕಾಗ ಅಡ್ಡ ಹಾದಿ ಹಿಡಿಯುವುದು ಅನಿವಾರ್ಯವೆಂಬ ಧ್ವನಿ ಈ ಕೃತಿಯಲ್ಲಿದೆ.

[ಕಾದಂಬರಿಗಳು: ೬೮]

೨ ಸಣ್ಣ ಕತೆಗಳು

ಅಗ್ನಿಕನ್ಯೆ (೧೯೪೭)

ಬೆಂಗಳೂರು, ಆನಂದ ಬ್ರದರ್ಸ್, ೧೯೫೦, ೧೫೧, ೨-೦೦

ಕಣ್ಣಮುಚ್ಚಾಲೆ

ಧಾರವಾಡ, ಕ. ಸಾ. ಮ., ೧೯೪೫, ೯೬, ೧-೭೫

-೯ ಕತೆಗಳಿವೆ. 'ಜಾತಿ ಹೀನನ ಮನೆಯ ಜ್ಯೋತಿ' ಎಂಬ ವಿಶೇಷ ಕತೆಯೂ ಸೇರಿದೆ.

ಕಾಮನ ಸೋಲು (೧೯೪೭)

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೧೩೯, ೧-೦೦

-ಈ ಮೊದಲು ಪತ್ರಿಕೆಗಳಲ್ಲಿ ಪ್ರಕಟವಾದ ೧೨ ಸ್ವತಂತ್ರ ಕಥೆಗಳಿವೆ.

ಕಿಡಿ (೧೯೩೧)

ಬೆಂಗಳೂರು, ಆನಂದ ಬ್ರದರ್ಸ್, ೧೯೪೯, ೭೯, ೧-೨೫

-ಸಾಮಾಜಿಕ ಸಮಸ್ಯೆಗಳಿಂದ ಕೂಡಿದ ೬ ಕತೆಗಳಿವೆ.

ಪಾಪ-ಪುಣ್ಯ (೧೯೪೩)

ಬೆಂಗಳೂರು, ಎಸ್ಸೆಸ್ಸೆನ್, ೧೯೪೯, ೧೨೯, ೧-೫೦

-೧೨ ಸಣ್ಣ ಕತೆಗಳ ಕೊನೆಗೆ 'ಸಾಹಿತ್ಯದಲ್ಲಿ ಶೀಲ ಪ್ರಶ್ನೆ' ಎಂಬ ಅನುಬಂಧವಿದೆ.

ಮಿಂಚು (೧೯೩೦)

ಬೆಂಗಳೂರು, ಮಾಧವ, ೧೯೪೭, ೧೨೦, ೧-೫೦

-ಅ. ನ. ಕೃ.ರ ಪ್ರಥಮ ಕಥಾಸಂಕಲನ.

ಶಿಲ್ಪಿ

ಬೆಂಗಳೂರು, ಆನಂದ, ೧೯೪೯, ೯೫, ೧-೨೫

-ಸೌಂದರ್ಯದ ಗುರಿ, ಅಧ್ಯಾತ್ಮ, ತ್ಯಾಗದ ನೆಲೆ ಮುಂತಾದ ಪ್ರಶ್ನೆಗಳು ಇಲ್ಲಿಯ ೬ ಕತೆಗಳಲ್ಲಿ ತಲೆದೋರಿವೆ.

ಸಮರ ಸುಂದರಿ

ಬೆಂಗಳೂರು, ಗೀತ, ೧೯೬೦, ೧೨೦, ೧-೫೦

[ಸಣ್ಣ ಕತೆಗಳು: ೮]

೩ ನಾಟಕಗಳು

ಆದದ್ದೇನು

೧೯೩೧,

-ಕಲಹದಿಂದ ಬಡಿದಾಡುವ ಎರಡು ಸಂಸಾರಗಳು, ಒಬ್ಬನ ತ್ಯಾಗದಿಂದಾಗಿ ಒಂದಾಗುವ ಸಂದರ್ಭವಿಲ್ಲಿದೆ.

ಆಹುತಿ

೧೯೩೦

ಎರಡು ನಾಟಕಗಳು

ಧಾರವಾಡ, ಕ. ಸಾ. ಮ., ೧೯೩೮, ೮೭, ೦-೫೦

-ಸ್ವರ್ಣಮೂರ್ತಿ ಮತ್ತು ಹಿರಣ್ಯಕಶಿಪು, ಎಂಬ ಎರಡು ಪೌರಾಣಿಕ ನಾಟಕಗಳಿವೆ.

ಕಿತ್ತೂರು ರಾಣಿ ಚೆನ್ನಮ್ಮ

ಬೆಂಗಳೂರು, ಆನಂದ, ೧೯೫೧, ೩೭, ೦-೭೫

-ಅರ್ವಾಚೀನ ಭಾರತದ ಸ್ವಾತಂತ್ರ್ಯ ಸಮರದ ಪ್ರಥಮ ಹುತಾತ್ಮೆಯಾದ ಕಿತ್ತೂರಿನ ಈ ರಾಣಿಯನ್ನು ಕುರಿತು ರೇಡಿಯೋ ನಾಟಕ.

ಗೋಮುಖ ವ್ಯಾಘ್ರ

ಬೆಂಗಳೂರು, ವಿಶ್ವವಾಣಿ, ೧೯೩೬, ೨೪, ೦-೫೦

-'ಅನ್ಯೋನ್ಯವಲ್ಲದ ದಾಂಪತ್ಯವು ಹೇಗೆ ಅನ್ಯ-ಅನ್ಯರಲ್ಲಿ ಮುಕ್ತಾಯವಾಗುತ್ತದೆ ಎಂಬುದನ್ನು ತೋರಿಸುವುದೇ ಇದರ ಉದ್ದೇಶ.'

ಜಗಜ್ಯೋತಿ ಬಸವೇಶ್ವರ

ಮೈಸೂರು, ಉಷಾ, ೧೯೪೯, ೧೪೪, ೨-೦೦

-ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸಿದ ಬಸವಣ್ಣನವರ ಚಾರಿತ್ರಿಕ ನಾಟಕ.

ಬಣ್ಣದ ಬೀಸಣಿಗೆ ಭಾಗ ೧ (೧೯೩೮)

ಮೈಸೂರು, ವಿದ್ಯಾನಿಧಿ, ೧೯೫೯, ೬೮, ೦-೮೦

-ಬಣ್ಣದ ಬೀಸಣಿಕೆ ಅಲ್ಲದೆ, ಜ್ವಾಲಾಮುಖಿ, ಅನುಗ್ರಹ ಈ ಮೂರು ಏಕಾಂಕಗಳ ಸಂಗ್ರಹ. ಸಿನೆಮಾ ಪ್ರಪಂಚ, ಹಿಂದೀ ಚಳುವಳಿ, ಆನೆಗುಂದಿಯ ಸಂಸಾನ-ಈ ವಸ್ತುಗಳಿವೆ.

ಬಣ್ಣದ ಬೀಸಣಿಗೆ ಭಾಗ ೨ (೧೯೩೮)

ಧಾರವಾಡ, ಪ್ರೇಮ, ೧೯೩೮, ೨೨೫, ——

-೪ ಏಕಾಂಕಗಳ ಸಂಗ್ರಹ. 'ಜೀವದಾಸೆಯ ಸಮಸ್ಯೆ', 'ಧರ್ಮಸಂಕಟ' ಎಂಬಿವು ಏಕಾಂಕದಲ್ಲಿದೆ. 'ಪಾಲು' ನಾಟಕದಲ್ಲಿ ಗ್ರಾಮ್ಯಜೀವನವನ್ನೂ 'ಗುಬ್ಬಚ್ಚಿಯ ಗೂಡು'ವಿನಲ್ಲಿ ವಿಷಮ ವಿವಾಹಸಮಸ್ಯೆಯನ್ನೂ ಚಿತ್ರಿಸಲಾಯಿತು. 'ವಿಶ್ವಧರ್ಮ'ವು ಇನ್ನೊಂದು ಏಕಾಂಕವಾಗಿದೆ.

ಮದುವೆಯೋ ಮನೆಹಾಳೋ (೧೯೨೮)

ಬೆಂಗಳೂರು, ಆನಂದ, ೧೯೫೦, ೯೧, ೧-೫೦

-ಮೊದಲ ನಾಟಕ. ವೃದ್ಧನೊಬ್ಬ ವಿವಾಹದ ಹುಚ್ಚಿಗೊಳಗಾಗಿ ಓರ್ವ ನಿರಪರಾಧಿನಿಯನ್ನು ದುಃಖದಲ್ಲಿ ಮುಳುಗಿಸುವ ಸನ್ನಿವೇಶ ಇಲ್ಲಿದೆ.

ಮಾಗಡಿ ಕೆಂಪೇಗೌಡ

ಬೆಂಗಳೂರು, ಅಶೋಕ, ೧೯೫೫, ೧೦೩, ೦-೭೫

-ಬೆಂಗಳೂರಿನ ಸಂಸ್ಥಾಪಕ ಕೆಂಪೇಗೌಡನ ಜೀವನವಿದೆ. ಉಳಿದೆರಡು-ಸೂತಪುತ್ರ ಕರ್ಣ, ಶ್ರೀ ರಾಮ ಪಾದುಕಾಪಟ್ಟಾಭಿಷೇಕಗಳು ಹೊಸ ದೃಷ್ಟಿಯುಳ್ಳ ಪೌರಾಣಿಕ ರೇಡಿಯೋ ನಾಟಕಗಳು.

ರಜಪೂತ ಲಕ್ಷ್ಮೀ (೧೯೪೫)

ಬೆಂಗಳೂರು, ಆನಂದ, ೧೯೫೦, ೧೧೪, ೧-೭೫

-ಹಿಂದೂ ಮುಸ್ಲಿಂ ಐಕ್ಯವನ್ನು ಬಿಂಬಿಸುವ ಐತಿಹಾಸಿಕ ನಾಟಕ.

ಸ್ವರ್ಣಮೂರ್ತಿ

ಬೆಂಗಳೂರು, ಆನಂದ, ೧೯೫೦, ೪೩, ೦-೬೨

-ಪೌರಾಣಿಕ ಸೀತಾ ಪರಿತ್ಯಾಗವನ್ನು ಆಧುನಿಕ ದೃಷ್ಟಿಕೋನದಿಂದ ಇಲ್ಲಿ ಕಂಡದ್ದಿದೆ.

ಹಿರಣ್ಯಕಶಿಪು

ಬೆಂಗಳೂರು, ಆನಂದ, ೧೯೫೦, ೪೧, ೦-೭೫

-ಹಿರಣ್ಯಕಶಿಪುವಿನ ಸಾವನ್ನು ವಿಶಿಷ್ಟ ದೃಷ್ಟಿಕೋನದಿಂದ ವಿವರಿಸಿದ ನಾಟಕ.

[ನಾಟಕಗಳು: ೧೩]

೪ ಪ್ರಬಂಧ ವಿಮರ್ಶೆ

ಅಖಂಡ ಕರ್ನಾಟಕ

ಬೆಂಗಳೂರು, ಪ್ರಗತಿಶೀಲ, ೧೯೪೬: ೯೦, ೧-೦೦

-ಕರ್ನಾಟಕದ ಪ್ರಚಲಿತ ಸಮಸ್ಯೆಗಳ ವಿವೇಚನೆಯನ್ನೊಳಗೊಂಡ ೨೪ ಲೇಖನಗಳ ಸಂಗ್ರಹ.

ಕನ್ನಡದ ದಾರಿ

ಬೆಂಗಳೂರು, ಪ್ರಗತಿಶೀಲ: ೧೯೪೬, ೧೫೦, ೨-೦೦

-ಕರ್ನಾಟಕ ಶಿಕ್ಷಣ, ಕಲೆ, ಸಂಸ್ಕೃತಿಗಳಿಗೆ ಸಂಬಂಧಪಟ್ಟ ವಿಚಾರಗಳನ್ನೊಳಗೊಂಡಿದೆ.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ

ಬೆಂಗಳೂರು, ಆನಂದ, ೧೯೫೦, ೧೩೦, ೧-೫೦

-ಕನ್ನಡ ಸಾಹಿತ್ಯ, ಕೈಲಾಸಂ, ಬಸವಣ್ಣ, ಸಂಸ್ಕೃತಿ-ಈ ವಿಷಯಗಳ ವಿವೇಚನೆ.

ಕರ್ನಾಟಕದ ಹಿತಚಿಂತನೆ

ಬೆಂಗಳೂರು, ಎಸ್ಸೆಸ್ಸೆನ್, ೧೯೪೭, ೯೨, ೧-೦೦

-ಕನ್ನಡಿಗರ ಜೀವನಕ್ಕೆ ಸಂಬಂಧಿಸಿದ ೧೫ ಲೇಖನಗಳಿವೆ.

ಪೊರಕೆ

ಬೆಂಗಳೂರು, ಪ್ರಗತಿಶೀಲ, ೧೯೪೬, ೮೦, ೧-೦೦

-ಹದಿನಾರು ಹರಟೆಗಳ ಸಂಗ್ರಹ.

ಬಳ್ಳಾರಿಯ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ್ಯ

ಬೆಂಗಳೂರು, ಅರುಣೋದಯ, ೧೯೫೩, ೭೦, ೦-೫೦

-ಬಳ್ಳಾರಿಯು ಕರ್ನಾಟಕದಲ್ಲಿ ಸೇರಬೇಕೆನ್ನುವ ಅಂಶವನ್ನು ಎಲ್ಲ ದೃಷ್ಟಿಗಳಿಂದ ವಿವೇಚಿಸಲಾದ ಕೃತಿ.

ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ

ಬೆಂಗಳೂರು, ವಿ. ಜಿ. ಟಿ., ೧೯೩೨, ೧೨೫, —

-ಸುಪ್ರಸಿದ್ಧ ಕಲಾವಿದ ರವಿವರ್ಮನ ವ್ಯಕ್ತಿತ್ವ, ಕಲೆಗಳ ಸವಿವರ ವಿಮರ್ಶೆ. ಅವನ ೨೨ ಚಿತ್ರಗಳೂ ಇವೆ.

ರಾಘವಾಂಕನ ಹರಿಶ್ಚಂದ್ರ ಕಾವ್ಯ

ಬೆಂಗಳೂರು, ವೆಂಕಟೇಶ್ವರ, ೧೯೫೦, ೬೬, ೧-೧೨

-ಮೂಲತಃ 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ'ಯಲ್ಲಿ ಬಂದಿದ್ದ ಒಂದು ರಸವಿಮರ್ಶೆ.

ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ (೧೯೪೩)

ಬೆಂಗಳೂರು, ಎಸ್ಸೆಸ್ಸೆನ್, ೧೯೫೯, ೨೧೨, —

-ವೀರಶೈವ ವಾಙ್ಮಯದ ವ್ಯಾಪ್ತಿ, ಸಾಂಸ್ಕೃತಿಕ ಅಂಶಗಳು, ಕೆಲವು ವೀರಶೈವ ಕವಿಗಳ ಕೃತಿಗಳ ವಿಮರ್ಶೆಗಳನ್ನೊಳಗೊಂಡಿದೆ.

ಸಜೀವ ಸಾಹಿತ್ಯ

ಹುಬ್ಬಳ್ಳಿ, ಜಿಲ್ಲಾ ಸಮ್ಮೇಳನ, ೧೯೪೬, ೩೭, —

-ಧಾರವಾಡ ಜಿಲ್ಲೆಯ ೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ.

ಸಮದರ್ಶನ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೧೨೭, ೨-೫೦

-ಕಲೆ, ಧರ್ಮ, ಸಂಸ್ಕೃತಿಗಳ ಮೇಲಿನ ಲೇಖನಗಳೂ, ಹಲವು ವ್ಯಕ್ತಿಗಳ ಪರಿಚಯಗಳೂ ಇರುವ ೧೬ ಪ್ರಬಂಧಗಳ ಸಂಕಲನ.

ಸಂಸ್ಕೃತಿಯ ವಿಶ್ವರೂಪ (೧೯೫೫)

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೭, ೧೫೨, ೧-೫೦

-ಕನ್ನಡ ಸಾಹಿತ್ಯ, ರಂಗಭೂಮಿ, ಲಲಿತಕಲೆಗಳು, ಇವೇ ಮುಂತಾದ ವಿಷಯಗಳನ್ನೊಳಗೊಂಡ ೧೫ ಪ್ರಬಂಧಗಳಿವೆ.

ಸಾಹಿತ್ಯ ಮತ್ತು ಕಾಮಪ್ರಚೋದನೆ (೧೯೫೨)

ತಿಪಟೂರು, ಸುದರ್ಶನ, ೧೯೬೦, ೨೭೨, ೨-೫೦

-'ನಗ್ನ ಸತ್ಯ, ಶನಿಸಂತಾನ' ಕಾದಂಬರಿಗಳು ಅಶ್ಲೀಲವಾಗಿವೆ ಯೆಂಬ ಟೀಕೆಗೆ ಗುರಿಯಾದಾಗ, ಅದಕ್ಕೆ ಉತ್ತರ ರೂಪವಾಗಿ ಹಿಂದು ಇಂದಿನ ಕನ್ನಡ ಸಾಹಿತ್ಯದಲ್ಲಿ ಕಾಮ ವಿಷಯ ಬಂದ ಬಗೆ, ವೇಶ್ಯಾ ಸಮಸ್ಯೆ, ವಿಮರ್ಶೆಯ ರೀತಿ-ನೀತಿ, ಇವುಗಳನ್ನು ಕುರಿತು ಬರೆದ ಸವಿವರವಾದ ಹಿರಿಯ ಪ್ರಬಂಧ.

ಸಾಹಿತ್ಯ ಮತ್ತು ಜೀವನ

ಧಾರವಾಡ, ಕ. ಸಾ. ಮಾ., ೧೯೪೪, ೧೩೦, ೧-೫೦

-ಕನ್ನಡ ಸಾಹಿತ್ಯಕ್ಕೆ ವಿಶೇಷವಾಗಿ ಸಂಬಂಧಪಟ್ಟ ೧೨ ಪ್ರಬಂಧ ಗಳ ಸಂಗ್ರಹ. ಈ ಮಾಲಿಕೆಯ ಕೆಳಗೆ, 'ಸಮದರ್ಶನ'ವೇ ಮುಂತಾದ ಇನ್ನೈದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ.

ಸಾಹಿತ್ಯ ಮತ್ತು ಯುಗಧರ್ಮ

ಬೆಂಗಳೂರು, ಆನಂದ, ೧೯೫೨, ೧೬೦, ೨-೦೦

-ಸಾಹಿತ್ಯಿಕ ಪ್ರಬಂಧಗಳಲ್ಲದೇ, ಸರ್ವಜ್ಞ, ಉಮರಖಯ್ಯಾಂ ಮುಂತಾದವರ ವಿಮರ್ಶೆ ಈ ಸಂಕಲನದಲ್ಲಿದೆ.

ಸಾಹಿತ್ಯ ಸಮಾರಾಧನೆ

ಮೈಸೂರು, ವಿದ್ಯಾನಿಧಿ, ೧೯೫೯, ೯೫, ೧-೨೫

-ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತ ೭ ಪ್ರಬಧಗಳ ಸಂಚಯನ.

ಹೊಸ ಹುಟ್ಟು

ಬೆಂಗಳೂರು, ವಿ. ಜಿ. ಟಿ., ೧೯೩೨, ೧೨೫, —

-ಧರ್ಮ, ರಾಜನೀತಿ, ಭಾಷೆ, ಚಿತ್ರಕಲೆ ಮೊದಲಾದ ವಿಷಯ ಗಳ ಮೇಲಿನ ೧೬ ಪ್ರಬಂಧಗಳಿವೆ. ಲೇಖಕರ ಪ್ರಥಮ ಪ್ರಬಂಧ ಸಂಕಲನ.

[ಪ್ರಬಂಧಗಳು: ೧೭]

೫ ಜೀವನ ಚರಿತ್ರೆಗಳು

ಅಲ್ಲಮ ಪ್ರಭು

ಮೈಸೂರು, ವಿದ್ಯಾನಿಧಿ, ೧೯೫೯, ೧೦೨, ೧-೨೫

-ಅಲ್ಲಮ ಪ್ರಭುವಿನ ಜೀವನ ಮತ್ತು ಆಯ್ದ ವಚನಗಳನ್ನೊಳಗೊಂಡ ಚಿಕ್ಕ ಆಕಾರದ ಹೊತ್ತಗೆ.

ಕನ್ನಡ ಕುಲರಸಿಕರು

ಬೆಂಗಳೂರು, ಆನಂದ, ೧೯೫೧, —, ೨-೫೦

-ಆಧುನಿಕ ಕನ್ನಡದ ೩೨ ಜನ ಸಾಹಿತ್ಯಿಕರ ರೇಖಾಚಿತ್ರಗಳ ಸಂಗ್ರಹ.

ಕರ್ನಾಟಕದ ಕಲಾವಿದರು (೧೯೫೬)

ಬೆಂಗಳೂರು, ಆನಂದ, ೧೯೫೨, —, ೪-೯೪

-ಕನ್ನಡದ ಪ್ರಮುಖ ಚಿತ್ರಗಾರ, ಸಂಗೀತಗಾರ, ಶಿಲ್ಪಿ ಹಾಗೂ ನೃತ್ಯಕೋವಿದರು-ಈ ೧೬ ಕಲಾವಿದರ ಪರಿಚಯ ಗ್ರಂಥ.

ಕೈಲಾಸಂ

ಶಿವಮೊಗ್ಗ, ಶಿವಮೊಗ್ಗ ಪ್ರೆಸ್, ೧೯೪೭, ೧೬೦, ೨-೨೫

-ಟಿ. ಪಿ. ಕೈ. ಅವರ ಜೀವನ, ಪ್ರತಿಭೆ, ವಿಚಾರಲಹರಿಗಳ ಮೆಚ್ಚಿಗೆ ಹಾಗೂ ವಿಮರ್ಶೆ.

ದೀನಬಂಧು ಕಬೀರ್

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೮, ೧೨೯, ೧-೫೦

-ಮಹಾತ್ಮಾ ಕಬೀರರ ಜೀವನ ಹಾಗೂ ಸಂದೇಶ.

ನನ್ನನ್ನು ನಾನೇ ಕಂಡೆ (೧೯೪೪)

ಮೈಸೂರು, ಡಿ. ವಿ. ಕೆ., ೧೯೬೦, ೮೯, ೧-೫೦

-ತನ್ನನ್ನೇ ಕುರಿತು ಆತ್ಮ ನಿರೀಕ್ಷಣೆಗೆ ಮಾಡಿಕೊಂಡ ಸಂದರ್ಶನ ರೂಪದ ಆತ್ಮಚರಿತ್ರೆ.

ಬಸವಣ್ಣನವರ ಅಮೃತ ವಾಣಿ (೧೯೪೩)

ಬೆಂಗಳೂರು, ವಿಶ್ವವಾಣಿ, ೧೯೫೯, ೧೪೬, ೨-೨೫

-ಬಸವಣ್ಣನವರ ಜೀವನ, ಸಂದೇಶ, ಹಾಗೂ ಕೆಲವು ವಚನಗಳ ನ್ನೊಳಗೊಂಡ ಗ್ರಂಥ.

ಭಾರತದ ಬಾಪೂ

ಬೆಂಗಳೂರು, ಎಸ್ಸೆಸ್ಸೆನ್, ೧೯೫೧, ೯೨, ೧-೨೫

-ಮಹಾತ್ಮಾ ಗಾಂಧಿಯವರ ಜೀವನ, ಅವರ ಸಾಧನೆಯ ಚಿತ್ರಣ ಈ ಗ್ರಂಥದಲ್ಲಿದೆ.

ವಿಶ್ವಬಂಧು ಶ್ರೀ ಬಸವೇಶ್ವರ

ಮೈಸೂರು, ವಿದ್ಯಾನಿಧಿ, ೧೯೫೯, ೮೧, ೧-೦೦

-ಬಸವಣ್ಣನವರ ಜೀವನದ ಕೆಲ ಮುಖಗಳ ವಿಶಿಷ್ಟ ಪರಿಚಯ ಗ್ರಂಥ.

ಶ್ರೀ ನಿಡುಮಾಮಿಡಿ ಸನ್ನಿಧಿಯವರು (೧೯೫೧)

ಬೆಂಗಳೂರು, ಪ್ರಬೋಧ, ೧೯೫೭, —, ೨-೦೦

-ಗೂಳೂರಿನ ನಿಡುಮಾಮಿಡಿ ಪೀಠದ ಜಗದ್ಗುರು ಶ್ರೀ ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯರ ಜೀವನ ಮತ್ತು ಕೃತಿಗಳ ಪರಿಚಯ-ವಿಮರ್ಶೆ.

ಸ್ವಾಮಿ ವಿವೇಕಾನಂದ

ಬೆಂಗಳೂರು, ಎಸ್ಸೆಸ್ಸೆನ್, ೧೯೪೫, ೧೨೧, ೧-೨೫

-ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಹಾಗೂ ಬೋಧೆಯುಳ್ಳ ಗ್ರಂಥ.

[ಜೀವನ ಚರಿತ್ರೆಗಳು: ೧೧]

೬ ಸಂಪಾದಿತ ಗ್ರಂಥಗಳು

ಕಾಮನ ಬಿಲ್ಲು ಭಾಗ ೧

ಧಾರವಾಡ, ಕ. ಸಾ. ಮ., ೧೯೩೩, ೩೫೦, ೧-೭೫

-ಕನ್ನಡದ ಪ್ರಾತಿನಿಧಿಕವಾದ ೨೪ ಕಥೆಗಳ ಸಂಕಲನ. ಕನ್ನಡ ಮತ್ತು ಸಣ್ಣ ಕತೆಯನ್ನು ಕುರಿತು ದೀರ್ಘವಾದ ಮುನ್ನುಡಿ ಇದೆ.

ಕಾಮನಬಿಲ್ಲು ಭಾಗ ೨

ಧಾರವಾಡ, ಕ. ಸಾ. ಮ., ೧೯೪೫, ೧೬೨, ೨-೨೫

-ಭಾರತೀಯ ಭಾಷೆಗಳಲ್ಲಿಯ ಪ್ರಸಿದ್ಧ ಕತೆಗಳ ಸಂಗ್ರಹ, ಹಾಗೂ ಆ ಭಾಷೆಗಳ ಸಾಹಿತ್ಯ ಪರಿಚಯ.

ಪ್ರಣಯ ಗೀತಗಳು (೧೯೩೦)

ಪ್ರಗತಿಶೀಲ ಸಾಹಿತ್ಯ

ಬೆಂಗಳೂರು, ಪ್ರಗತಿಶೀಲ, ೧೯೪೪, ೨೧೨, ೨-೦೦

-ಸಾಹಿತ್ಯದ ವಿವಿಧ ಅಂಶಗಳನ್ನು ಕುರಿತ ೨೬ ಪ್ರಬಂಧಗಳಲ್ಲಿ, ಅ. ನ. ಕೃ. ಬರೆದವುಗಳು ನಾಲ್ಕು. ಇತರ ಲೇಖಕರ ಸಂಕ್ಷಿಪ್ತ ಪರಿಚಯವೂ ಇದೆ.

ಭಗವದ್ಗೀತಾರ್ಥ ಸಾರ

ಬೆಂಗಳೂರು, ಸ್ಟ್ಯಾಂಡರ್ಡ್, ೧೯೫೬, ೧೭೬, ೨-೦೦

-ಹಾಡಲಿಕ್ಕೆ ಅನುಕೂಲವಾಗುವಂತೆ, ಭಗವದ್ಗೀತೆಯ ತಿರುಳನ್ನು ಕನ್ನಡಿಸಿದವರು ಅ. ನ. ಕೃ.ರ ಮುತ್ತಾತ ಕೃಷ್ಣಯೋಗಿಗಳು. ಅವರ ಇತರ ಅಧ್ಯಾತ್ಮ ಕೀರ್ತನೆಗಳೂ, ಬೆಳಗುತ್ತ ಪಾಳೆಯಗಾರರ ಬಗ್ಗೆ ಒಂದು ಲೇಖನವೂ ಇವೆ. ದೀರ್ಘ ಮುನ್ನುಡಿಯೊಂದಿಗೆ ಸಂಪಾದಿತವಾದ ಗ್ರಂಥ.

ಮರುಳು ಸಿದ್ಧ ಕಾವ್ಯ

ಬೆಂಗಳೂರು, ವಿಶ್ವವಾಣಿ, ೧೯೪೬, ೧೮೦, ೩-೦೦

-ಪಂಚಾಚಾರ್ಯರಲ್ಲಿ ಒಬ್ಬನಾದ ಮರುಳಸಿದ್ಧನನ್ನು ಕುರಿತು ದೇವಕವಿ ಬರೆದ ಹಳೆಗನ್ನಡ ಕಾವ್ಯದ ಪಠ್ಯ, ಹಾಗೂ ವಿವರವಾದ ಪೀಠಿಕೆಯೊಡನೆ ಸಂಪಾದಿತವಾದ ಗ್ರಂಥ.

ಮ್ಯಾಕ್ಸಿಂ ಗಾರ್ಕಿ

ಬೆಂಗಳೂರು, ಪ್ರಗತಿಶೀಲ, ೨೯೪೪, ೩೭೬, ೫-೫೦

-ರಶಿಯನ್ ಸಾಹಿತಿ, ಗಾರ್ಕಿಯ ಜೀವನ. ಕೃತಿಗಳ ಮೇಲೆ ವಿವಿಧ ಲೇಖಕರು ಬರೆದ ಸ್ಮಾರಕ ಗ್ರಂಥ.

ರಸಋಷಿ

ಬೆಂಗಳೂರು, ಪ್ರಗತಿಶೀಲ, —, ೧೪೨, ೧-೫೦

-'ಪ್ರಗತಿಶೀಲ ಕವಿತಾಸಂಗ್ರಹ' ಕವಿಗಳ ಅಲ್ಪ ಪರಿಚಯವೂ ಇದೆ. ಗ್ರಂಥದ ಸಂಪಾದನ ಕಾರ್ಯವಲ್ಲದೆ ಅ. ನ. ಕೃ. ಉಮರನ ರುಬಾಯಿಯಾತ್‌ದ ೫೧ ಪದ್ಯಗಳನ್ನು ಅನುವಾದಿಸಿದ್ದಾರೆ.

[ಸಂಪಾದಿತ ಗ್ರಂಥಗಳು: ೮]

ಪತ್ರಿಕಾ ಸಂಪಾದಕತ್ವ

ಕಥಾಂಜಲಿ	೧೯೨೮
ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ	೧೯೪೪-೪೫
ವಿಶ್ವವಾಣಿ	೧೯೩೯
ಕನ್ನಡ ನುಡಿ	೧೯೩೯

೭ ಅನುವಾದ ಗ್ರಂಥಗಳು

ನೀಲಲೋಚನೆ ಮತ್ತು ಇತರ ಕತೆಗಳು

ಮೈಸೂರು, ಪೀಪಲ್ಸ್, ೧೯೫೭, ೨೪೦, ೧-೫೦

-ಮ್ಯಾಕ್ಸಿಂ ಗಾರ್ಕಿಯ ಹಲವು ಕತೆಗಳ ಅನುವಾದ.

ರಸಿಕಾಗ್ರಣಿ

ಮೈಸೂರು, ಪೀಪಲ್ಸ್, ೧೯೫೯, —, ೧-೭೫

-ಮ್ಯಾಕ್ಸಿಂ ಗಾರ್ಕಿಯ ಹಲವು ಸಣ್ಣ ಕತೆಗಳು.

[ಅನುವಾದಿತ ಗ್ರಂಥಗಳು: ೨]

ಪರಿಶಿಷ್ಟ

ಅ. ನ. ಕೃ. ಬಗ್ಗೆ ಕೆಲವು ಗ್ರಂಥಗಳು

ಅ. ನ. ಕೃ. —ತ. ರಾ. ಸುಬ್ಬರಾಯ

ಚಿತ್ರದುರ್ಗ, ಸಾಹಿತ್ಯಾಲಯ, ೧೯೪೭, ೨೧೦, —

-ಕೃಷ್ಣರಾಯರ ವ್ಯಕ್ತಿತ್ವ ಹಾಗೂ ಕೃತಿ'ರಚನೆಗಳ ವಿಮರ್ಶೆ.

ಅ. ನ. ಕೃ. ವಿಭಾಗ —'ಸಾಹಿತ್ಯಾಂಕ'ದಲ್ಲಿ

-ಎಚ್. ಬಿ. ಕುಲಕರ್ಣಿಯವರಿಂದ ಸಂಪಾದಿತ ಸಾಹಿತ್ಯಾಂಕ ದಲ್ಲಿರುವ ೫ ಲೇಖನಗಳ ಸಂಗ್ರಹ.

ಸಂಧ್ಯಾರಾಗ ಪ್ರಶಸ್ತಿ

ಬೆಂಗಳೂರು, ಎಸ್ಸೆಸ್ಸೆನ್, ೧೯೪೨, ೯೨, ೦-೬೨

-ಸಾರ್ವತ್ರಿಕ ಪ್ರಶಸ್ತಿಯನ್ನು ಹೊಂದಿದ 'ಸಂಧ್ಯಾರಾಗ' ಕಾದಂಬರಿಯ ಬಗ್ಗೆ ೧೩ ಜನ ನಾಡಿನ ಸಾಹಿತ್ಯಿಕರಿಂದ ಬರೆಯಲಾದ ಲೇಖನಗಳ ಸಂಕಲನ.

ಮಣಿಪಾಲ ಪವರ್ ಪ್ರೆಸ್, ಮಣಿಪಾಲ.
ಇವರ ಮುದ್ರಣ